**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಚಿಂತಾಮಣಿ.**

**ಸಿ.ಸಿ.ನಂ.1075/2022**

**ಫಿರ್ಯಾದುದಾರರು** : ಶ್ರೀ. ಎನ್.ಶಂಕರಪ್ಪ,

ವಿರುದ್ಧ

**ಆರೋಪಿ** : ಎಂ.ಎಸ್.ರಾಜಗೋಪಾಲ,

## :: ಆಪಾದನೆ ::

ದಂಡ ಪ್ರಕ್ರಿಯಾ ಸಂಹಿತೆ ಕಲಂ **251** ರ ರಡಿಯಲ್ಲಿ ಮಾಡಿದ ಆಪಾಧನೆ

**ನಾನು, ಶ್ರೀಮತಿ. ಹರ್ಷಿತ,** ಬಿ.ಎ., ಎಲ್‌ಎಲ್.ಬಿ.,
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಚಿಂತಾಮಣಿ.**

ಆರೋಪಿಃ ಎಂ.ಎಸ್.ರಾಜಗೋಪಾಲ,
ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೇಃ-

ನೀವು ಆರೋಪಿತರು, ಪಿರ್ಯಾದಿದಾರರಾದ **ಶ್ರೀ. ಎನ್.ಶಂಕರಪ್ಪ** ಮತ್ತು ಆರೋಪಿಯಾದ ನೀವು ಪರಸ್ಪರ ಪರಿಚಯವಿದ್ದು, 2021 ಡಿಸೆಂಬರ್ ಮೊದಲನೇ ವಾರದಂದು ನಿಮ್ಮ ಕುಟುಂಬದ ಕಾನೂನು ಬದ್ಧ ನಿರ್ವಹಣೆಗಾಗಿ ಹಾಗೂ ಇತರೆ ಅವಶ್ಯಕತೆಗಾಗಿ ರೂ.1,60,000/- ರೂಗಳನ್ನು ಕೈ ಸಾಲವಾಗಿ ಕೇಳಿದ್ದು, ಅದರಂತೆ ಪಿರ್ಯಾದಾರರು ದಿನಾಂಕಃ10-12-2021 ರೂ.1,60,000/- ರೂಗಳನ್ನು ನಿಮಗೆ ಕೈ ಸಾಲವಾಗಿ ನೀಡಿದ್ದು, ಆರೋಪಿಯಾದ ನೀವು 05 ತಿಂಗಳ ಒಳಗಾಗಿ ಮರು ಪಾವತಿ ಮಾಡುವುದಾಗಿ ತಿಳಿಸಿ, ನಂತರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪಿಸಿಆರ್ ಕಾಂಪ್ಲೆಕ್ಸ್, ಚಿಂತಾಮಣಿ ಶಾಖೆ ಸೇರಿದ ಚೆಕ್ ನಂ.682862 ರೂ.1,60,000/- ರಂತೆ ದಿಃ21-05-2022 ರಂತೆ ಚೆಕ್ ಅನ್ನು ನೀಡಿದ್ದು, ಅದರಂತೆ ಪಿರ್ಯಾದಿದಾರರು ತನ್ನ ಖಾತೆಯಾದ ಸ್ಟೇಟ್ ಬ್ಯಾಂಕ್ ಆಫ್

ಇಂಡಿಯಾ, ಪಿಸಿಆರ್ ಕಾಂಪ್ಲೆಕ್ಸ್, ಚಿಂತಾಮಣಿ ಶಾಖೆ ಚೆಕ್ ಅನ್ನು ದಿನಾಂಕ 21-05-2022 ರಂದು ನಗಧಿಕರಣಕ್ಕೆ ಸಲ್ಲಿಸಿದಾಗ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ದಿನಾಂಕ 20-06-2022 ರಂದು ವಾಪಸ್ಸು ಬಂದಿದ್ದು, ನಂತರ ಪಿರ್ಯಾದಿ ತನ್ನ ವಕೀಲರ ಮೂಲಕ ದಿನಾಂಕ 18-07-2022 ರಂದು ನೋಟಿಸನ್ನು ನೀಡಿದ್ದು, ಸದರಿ ನೋಟೀಸು ದಿನಾಂಕ 22-07-2022 ರಂದು "Party not in station hence return to sender" ಎಂಬ ಷರದೊಂದಿಗೆ ವಾಪಸ್ಸು ಬಂದಿದ್ದು, ನೀವು ಚೆಕ್ ನ ಹಣ ಮರಪಾವತಿ ಮಾಡದೆ ಇದ್ದು, ಆ ಮೂಲಕ ಕಾಯ್ದೆ ಕಲಂ 138 ಮತ್ತು 142 ರ ಎನ್.ಐ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಪ್ರಶ್ನೆಃ ಈ ಮೇಲೆ ಆಪಾದನೆಗಳನ್ನು ಒಪ್ಪಿಕೊಳ್ಳುವಿರೋ ? ಅಥವಾ ವಿಚಾರಣೆಯಾಗಬೇಕೆಂದು ಕೇಳುವಿರೋ?

ಉತ್ತರಃ

(ಈ ಮೇಲಿನ ಆಪಾಧನೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಕೊಟ್ಟ ಉತ್ತರವನ್ನು ಕೊಟ್ಟಂತೆ ಬರೆಯಲಾಯಿತು.)

**ಸ್ಥಳಃ ಚಿಂತಾಮಣಿ**

**ದಿನಾಂಕಃ 24-07-2025.** **ಸಹಿ/-**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಲಯ, ಚಿಂತಾಮಣಿ.**

ಆರೋಪಿಯ ಸಹಿಃ

## ಅಧಿಕ ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಚಿಂತಾಮಣಿ.

**ಸಿ.ಸಿ.1075/2022**

**ಫಿರ್ಯಾದಿ** : ಶ್ರೀ. ಎನ್.ಶಂಕರಪ್ಪ,

: ವಿರುದ್ಧ :

**ಆರೋಪಿ** : ಎಂ.ಎಸ್ ರಾಜಗೋಪಾಲ ಬಿನ್ ಸುಬ್ಬಣ್ಣ, 46 ವರ್ಷ,
ವಾಸಃ ಮೈಲಾಪುರ ಗ್ರಾಮ, ಕೈವಾರ ಹೋಬಳಿ, ಚಿಂತಾಮಣಿ ತಾಲ್ಲೂಕು.

ಕೆಲಸದ ಸ್ಥಳಃ ಪಿಇಟಿ ಟೀಚರ್ (ಪ್ರೌಢ ಶಾಲೆ ವಿಭಾಗ), ಸರ್ಕಾರಿ ಬಾಲಕಿಯರ ಕಾಲೇಜು, ಚಿಂತಾಮಣಿ.

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತನ ಹೇಳಿಕೆ

**ಪ್ರಶ್ನೆ** 1) ಈ ಪ್ರಕರಣದಲ್ಲಿಯ ಸಾಕ್ಷಿದಾರರ ಸಾಕ್ಷಿಯನ್ನು ಕೇಳಿದ್ದೀರಾ ?

ಉತ್ತರಃ

**ಪ್ರಶ್ನೆ** 2) **ಫ್ರಾಸಾ-1 ಶ್ರೀ. ಎನ್.ಶಂಕರಪ್ಪ** ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ, ಪಿರ್ಯಾದಿದಾರರಾದ **ಶ್ರೀ. ಎನ್.ಶಂಕರಪ್ಪ** ಮತ್ತು ಆರೋಪಿಯಾದ ನೀವು ಪರಸ್ಪರ ಪರಿಚಯವಿದ್ದು, 2021 ಡಿಸೆಂಬರ್ ಮೊದಲನೇ ವಾರದಂದು ನಿಮ್ಮ ಕುಟುಂಬದ ಕಾನೂನು ಬದ್ಧ ನಿರ್ವಹಣೆಗಾಗಿ ಹಾಗೂ ಇತರೆ ಅವಶ್ಯಕತೆಗಾಗಿ ರೂ.1,60,000/- ರೂಗಳನ್ನು ಕೈ ಸಾಲವಾಗಿ ಕೇಳಿದ್ದು, ಅದರಂತೆ ಪಿರ್ಯಾದಾರರು ದಿನಾಂಕಃ10-12-2021 ರೂ.1,60,000/- ರೂಗಳನ್ನು ನಿಮಗೆ ಕೈ ಸಾಲವಾಗಿ ನೀಡಿದ್ದು, ಆರೋಪಿಯಾದ ನೀವು 05 ತಿಂಗಳ ಒಳಗಾಗಿ ಮರು ಪಾವತಿ ಮಾಡುವುದಾಗಿ ತಿಳಿಸಿ, ನಂತರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪಿಸಿಆರ್ ಕಾಂಪ್ಲೆಕ್ಸ್,

ಚಿಂತಾಮಣಿ ಶಾಖೆ ಸೇರಿದ ಚೆಕ್ ನಂ.682862 ರೂ.1,60,000/- ರಂತೆ ದಿಃ21-05-2022 ರಂತೆ ಚೆಕ್ ಅನ್ನು ನೀಡಿರುತ್ತೀರಿ, ಅಂತಾ ಸಾಕ್ಷ್ಯ ನುಡಿದಿದ್ದಾರೆ ಇದಕ್ಕೆ ನೀವೇನು ಹೇಳಬಯಸುವಿರಿ ?

**ಉತ್ತರಃ**

**ಪ್ರಶ್ನೆ** 3) **ಫ಼ಾಸಾ-1** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ, ಚೆಕ್ಕನ್ನು ನಗದೀಕರಣಕ್ಕೆ ಸಲ್ಲಿಸಿದಾಗ "ಖಾತೆಯಲ್ಲಿ ಸಾಕಷ್ಟು ಹಣವಿಲ್ಲ" ಎಂಬ ಹಿಂಬರಹದೊಂದಿಗೆ ಚೆಕ್ಕನ್ನು ಹಿಂದಿರುಗಿ ಕಳುಹಿಸಿದ್ದು ಇರುತ್ತದೆ ಅಂತಾ ಸಾಕ್ಷ ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳಬಯಸುವಿರಿ ?

**ಉತ್ತರಃ**

**ಪ್ರಶ್ನೆ** 4) **ಫ಼ಾಸಾ-1** ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ, ವಕೀಲರ ಮುಖೇನ ನಿಮಗೆ ದಿನಾಂಕ 18-07-2022 ರಂದು ನೋಟಿಸನ್ನು ನೀಡಿದ್ದು, ಸದರಿ ನೋಟೀಸು ದಿನಾಂಕ 22-07-2022 ರಂದು "Party not in station hence return to sender" ಎಂಬ ಷರದೊಂದಿಗೆ ವಾಪಸ್ಸು ಬಂದಿದ್ದು ನೀವು ಮೋಸ ಮಾಡುವ ಉದ್ದೇಶದಿಂದ ಚೆಕ್ಕನ ಹಣ ಮರು ಪಾವತಿ ಮಾಡದೇ ಮೋಸ ಮಾಡಿರುತ್ತೀರಿ ಅಂತಾ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಬಯಸುವಿರಿ ?

**ಉತ್ತರಃ**

05) ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಇದೆಯಾ ?

**ಉತ್ತರಃ**

06) **ಆರೋಪಿಯಾದ ನೀವು ಈ ವಿಚಾರವಾಗಿ ಏನನ್ನಾದರೂ ಹೇಳಲು** ಬಯಸುವಿರಾ?

**ಉತ್ತರಃ**

(ಮೇಲಿನ ಎಲ್ಲಾ ಪ್ರಶ್ನೆಗಳನ್ನು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ತಿಳಿಸಿ, ಕೇಳಿದಾಗ ಅವರು ಅವುಗಳನ್ನು ತಿಳಿದುಕೊಂಡು ಉತ್ತರಿಸಿದ್ದು, ಅಂತಹ ಉತ್ತರಗಳನ್ನು ಪ್ರತಿ ಪ್ರಶ್ನೆಗಳಡಿ ಅವರಿಂದ ಕನ್ನಡದಲ್ಲಿಯೇ ನಮೂದಿಸಿಕೊಂಡಿದ್ದಾಗಿ ಈ ಮೂಲಕ ದೃಢೀಕರಿಸಿದೆ.)

**ಚಿಂತಾಮಣಿ: ಚಿಂತಾಮಣಿ**

**ದಿನಾಂಕಃ 24-07-2025.** **ಸಹಿ/-**

**ಅಧಿಕ ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ**
**ಚಿಂತಾಮಣಿ.**

**ಆರೋಪಿ ಸಹಿ.**